ಬುದ್ಧಿಮಾಂದ್ಯವಿದ್ದಿತೋ, ತೀರಿಕೊಂಡ ಅವನ ಅವ್ವ ಅಪ್ಪಂದಿರಿಗೂ ಸರಿಯಾಗಿ ಗೊತ್ತಿಲ್ಲ.

ಕೊಂಗುನಾದ ಲಾರಿ ತೊಳೆಯುತ್ತಿದ್ದ ಎಡೆಯಲ್ಲಿ ದಿನಾ ಅವನು ನೋಡುತ್ತಿದ್ದುದು ಕೊಳೆ, ಕೆಸರು, ಬಚ್ಚಲ ರಾಡಿ. ಅದಕ್ಕೆ ಮೆತ್ತಿದ್ದ ಎಣ್ಣೆ ಜಿಡ್ಡು. ಚೆಡ್ಡಿ ಮಾತ್ರದಲ್ಲಿದ್ದ ಅವನ ಮೈಯ್ಯಲ್ಲೂ ಅದೇ ಮಣ್ಣು. ಅವನೊಡನಿದ್ದ ಕ್ಲೀನರುಗಳು ಕೊಂಗನನ್ನು ಬೆದರಿಸಿ, ಇಲ್ಲ ಅರ್ಧ ಪ್ಲೇಟು ಚಿತ್ರಾನ್ನ ಕೊಡಿಸಿ ತಾವು ಕ್ಲೀನು ಮಾಡಬೇಕಿದ್ದ ಲಾರಿಗಳನ್ನೆಲ್ಲ ತೊಳೆಸಿ ಒಳಗೊಳಗೆ ನಗುತ್ತಿದ್ದರು. ಜನ ನೋಡಲು, ಮಾತಾಡಲು ಹೆದರುತ್ತಿದ್ದ ಕೊಂಗು, ತಿರುಮೊಳಿಯಕ್ಕನೊಂದಿಗೆ ಯಾವಾಗ ಸ್ಮಶಾನಕ್ಕೆ ಬಂದನೋ ಅದು ಅವನಿಗೆ ಮುನಿಜನಗಳ ಬೀಡಿನಂತೆ ಕಂಡುಬಿಟ್ಟಿತು. ನೋಡಿದರೆ ಅಲ್ಲೆಲ್ಲ ಆಲ, ಅರಳಿ, ಬೇವು, ಹುಣಸೇ ಮರಗಳು. ಮರಗಣೆಗಿಲೆಯ ಹೂವಿನ ಸುವಾಸನೆ ಬೇರೆ. ಊರೊಳಗಿನ ನಿತ್ಯ ಸೆಖೆ ತಾಳಲಾರದೆ ಸ್ಮಶಾನದ ಗಿಡಮರಗಳ ಮೇಲೆಯೇ ಸಭೆ ನೆರೆದು ಲೋಕದ ವಿದ್ಯಾಮಾನ, ಹವಾಮಾನಗಳನ್ನೆಲ್ಲ ಚರ್ಚಿಸುತ್ತಿವೆಯೇ ಎಂಬಂತೆ ಹತ್ತಾರು ಜಾತಿಯ ಹಕ್ಕಿಪಕ್ಷಿಗಳ ಕಲರವ. ಇದರೊಂದಿಗೆ ಕೊಂಗುನಾದನೊಂದಿಗೆ ಇದ್ದದ್ದು ಅವನು ಅಲ್ಲೇ ಸಾಕಿದ ನಾಯಿ ಸಿಂಗನಾದ.

ತಿರುಮೊಳಿ ಕೂಸು ಕಣ್ಣಾಸೆಲ್ವಿಯೊಂದಿಗೆ ಸ್ಮಶಾನದೊತ್ತಿನ ಶೆಡ್ಡಿನಲ್ಲಿ ಮಲಗಿದರೆ, ಕೊಂಗುನಾದ ಶ್ವಾನಮಿತ್ರ ಸಿಂಗನಾದನೊಂದಿಗೆ ಸ್ಮಶಾನದ ನಡುಮಧ್ಯದ ಅರಳಿಮರದ ಜಗಲಿ ಕಟ್ಟೆಯಲ್ಲಿ ವಸತಿ ಇರುತ್ತಿದ್ದ. ಎರಡು ಮೂರು ತಿಂಗಳಿಗೊಮ್ಮೆ ತಂಗಮಣಿ ಲಾರಿಬಿಟ್ಟು ವಾರವೊಪ್ಪೊತ್ತಿನ ವಿರಾಮಕ್ಕಾಗಿ, ಹೆಂಡತಿ ಮಗಳ ಮುಖ ದರ್ಶನಕ್ಕಾಗಿ ಬರುವಲ್ಲಿ ಅವನೂ ಅದೇ ಅರಳಿಕಟ್ಟೆಯಲ್ಲಿ ಮೊಕ್ಕಾಮು ಮಾಡುತ್ತಿದ್ದ. ಆಗ ಮಾತ್ರ ಅವರಿಬ್ಬರೇ ಮಾತುಕತೆಯಲ್ಲಿ ತೊಡಗುವರು. ತಂಗಮಣಿ ಕೊಂಗುವಿನೊಂದಿಗೆ ತಾನು ಊರು, ಕೇರಿ, ನಗರವಲ್ಲದೆ ಅರಣ್ಯ ಮಾರ್ಗದಲ್ಲಿ ಕಂಡದ್ದನ್ನೆಲ್ಲ ಕಥೆಯಂತೆ ಹೇಳಿದರೆ ಮಾತು ಬಾರದೆ ತೊದಲುತ್ತಿದ್ದ ಕೊಂಗು ಉಗ್ಗಡಿಸಿ, ತೊದಲಿ, 'ಆಮಾವಾ ಅಣ್ಣೇ' ಅನ್ನುವನು. ಮಧ್ಯೆ ಮಧ್ಯೆ ಏನೋ ಅರ್ಥವಾದಂತಾಗಲು ಈ ಕೊಂಗನಿಗೆ ತಾನು ಹೇಳುತ್ತಿರುವುದು ಅರ್ಥವಾಗಿಬಿಟ್ಟಿತಲ್ಲಾ ಎಂದು ತಂಗಮಣಿ ತಲೆಯಾಡಿಸುವನು.

ಸ್ಮಶಾನದ ಆ ನಿಶ್ಯಬ್ದದಲ್ಲಿ ಅವರೀರ್ವರ ಅಸ್ಪಷ್ಟ ಮಾತು, ನಗು ತಿರುಮೊಳಿಗೆ, ಕಣ್ಣಾಸೆಲ್ವಿಗೆ ಕೇಳಿಸುವುದು. ಆಗ ತಿರುಮೊಳಿ ಅಸಮಾಧಾನದಿಂದ ಯಾವ ನರಮಾನವರು ತಾನೇ ಇಲ್ಲಿ ಬಂದು ಇವರನ್ನು ನಗಿಸಲು ಸಾಧ್ಯ? ಸತ್ತು ಬಿದ್ದ ಹೆಣಗಳೇ ಪಿಶಾಚಿಗಳಾಗಿ ಎದ್ದು ಇವರ ಮುಂದೆ ಕುಣಿದು ನಗಿಸುತ್ತಿರಬಹುದು ಎಂದು ಗೊಣಗುತ್ತಿದ್ದಳು.

ಅಪ್ಪನೂ, ಕೊಂಗುವೂ ಏನೇನು ಮಾತಾಡಿ ನಗುತ್ತಿರಬಹುದು ಎಂದು ಕೂಸು ಕಣ್ಣಾಸೆಲ್ವಿಗೆ ಭಾರಿ ಕುತೂಹಲವಾಗಿ ಅವರತ್ತ ತಾನೂ ಕೂತು ಕತೆಗಳನ್ನೆಲ್ಲ ಕೇಳಿಸಿಕೊಳ್ಳಬೇಕೆಂಬ ಕುತೂಹಲ ಹುಟ್ಟಿ ಅತ್ತ ಕಣ್ಣು ತಿರುವಿದರೆ ಅವ್ವ, 'ಅಡ್ಯೆ ಅಂದ ಪೈತ್ಯಂ ಪಿಡಿಚ್ಚವರೆ ಎನ್ನಡಿ ಪಾಕ್ಕರೇ, ಇದಾ ಪೋಯಿ ಸೋರು, ಸಾಂಬಾರು ಕುಡುತ್ತು ಜಲ್ದಿ ವಾಡಿ' ಅಂದು ಅನ್ನ ಸಾರಿನ ತಪ್ಪಲೆ, ತಣೆಗೆಯನ್ನು ಕಳುಹಿಸುತ್ತಿದ್ದಳು. ಭೋಜನ ಕೊಡಬಂದ ಮಗಳ ತಲೆ ಸವರುತ್ತಾ ತಂಗಮಣಿ ಅವನಿಗವನೇ ಎಂಬಂತೆ ಹೇಳುವ ಕಥೆ ಕಣ್ಣಾಸೆಲ್ವಿಗೂ, ಕೊಂಗುನಾದನಿಗೂ ಕೇಳಿಸುವುದು.

'...ವಡಭಾರತ ಮುಟ್ಟುವ ಮೊದಲು ತೆಲುಗುನಾಡು ದಾಟುವಾಗ್ಗೆ ಬೋಳುಬೋಳಾದ ಕಾಡು ಸಿಗುವುದು. ಆಹಾ ಹಡಗು ಸಮುದ್ರದಲ್ಲಿ ತೇಲುವ ಮಾದರಿ ಭಾರಿ ಸರಕಿನ ಲಾರಿ ದಾರಿಯಲ್ಲಿ ನಿಧಾನವಾಗಿ ಹರಿಯುತ್ತಲಿದೆ. ಆಗ ಏನಾಯಿತೆಂದರೆ' ಎಂದು ತಂಗಮಣಿ ಮುಖದಲ್ಲಿ ಕೊಂಚ ಭಯ ಸೂಸುವನು. ಕಣ್ಣಾಸೆಲ್ವಿಯು ತನ್ನ ಮುಖದಲ್ಲಿ ಮತ್ತಷ್ಟು ಭಯವನ್ನು ಚೆಲ್ಲುತ್ತ ಅಪ್ಪನ ಲಾರಿಯ ಎದುರು ಹುಲಿ ಬಂದಿತೇ, ಆನೆ ಅಡ್ಡವಾಯಿತೇ, ಕರಡಿ, ಕಾಡೆಮ್ಮೆ ಎದುರಾದವೆ ಎಂದುಕೊಳ್ಳುವಳು.